

ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧೀಜಿಯವರ ಪ್ರಭಾವ ಮತ್ತು ಬಂಗಾಳದ ಭಾರತೀಯ ಕಲೆಯ ಪುನರುತ್ಥಾನದ ಬೆಳಕಿನಲ್ಲಿ ಅರಳಿದ ಮೈಸೂರಿನ ಅಪರೂಪದ ಕಲಾವಿದೆ ವೈ.ಜಿ. ಶ್ರೀಮತಿ (1926–2007).

ಮದರಾಸ್‌ನಲ್ಲಿ ಬೆಳೆದು, ಅಂತಿಮವಾಗಿ ನ್ಯೂಯಾರ್ಕ್‌ನಲ್ಲಿ ನೆಲೆಸಿದರು. ಬದುಕಿನುದ್ದಕ್ಕೂ ಭಾರತೀಯ ಶೈಲಿಯ ಕೃತಿಗಳನ್ನು ಶ್ರೀಮತಿಯವರು ತಮ್ಮ ಆತ್ಮಸಂತೋಷಕ್ಕಾಗಿ ಸೃಷ್ಟಿಸಿದರು. ಅವರು ಬಾಲ್ಯದಲ್ಲಿಯೇ ಮೈಸೂರಿನಲ್ಲಿ ಸಂಗೀತ, ನೃತ್ಯ ಮತ್ತು ಚಿತ್ರಕಲೆಗಳನ್ನು ಅಧ್ಯಯನ ಮಾಡಿದರು. ಆ ಬಗ್ಗೆ ಹೆಚ್ಚಿನ ವಿವರಗಳು ತಿಳಿದುಬಂದಿಲ್ಲ. ಆನಂತರ ಮದ್ರಾಸಿನಲ್ಲಿ ತಮಿಳು ಬ್ರಾಹ್ಮಣ ಕುಟುಂಬದಲ್ಲಿ ಬೆಳೆದರು. 1940ರಲ್ಲಿ ಅತ್ಯಂತ ಚಿಕ್ಕ ವಯಸ್ಸಿನಲ್ಲೇ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಆಕರ್ಷಣೆಗೆ ಕಲಾವಿದೆ ಶ್ರೀಮತಿ ಒಳಗಾದರು.

1946ರಲ್ಲಿ ಗಾಂಧೀಜಿಯವರು ಭಾಷಣ ಮಾಡಿದ ಮದರಾಸಿನ ಹಲವಾರು ಸಭೆಗಳಲ್ಲಿ, ಅನೇಕ ಭಾಷೆಗಳಲ್ಲಿ ಭಕ್ತಿಗೀತೆಗಳನ್ನು ಹಾಡಲು ಶ್ರೀಮತಿ ಅವರನ್ನು ಆಹ್ವಾನಿಸಲಾಯಿತು. ಸಹಜವಾಗಿ, ಗಾಂಧಿಯವರೊಂದಿಗೆ ಕಳೆದ ಆ ಸಮಯಗಳು ಅವರ ಮೇಲೆ ಗಾಢವಾದ ಪ್ರಭಾವ ಬೀರಿದವು. ಆಗಸ್ಟ್ 1947ರ ಹೊತ್ತಿಗೆ ದೇಶವು ಸಂಪೂರ್ಣ ಸ್ವರಾಜ್ಯವನ್ನು ಪಡೆದ ಐದು ತಿಂಗಳಲ್ಲಿಯೇ ದೆಹಲಿಯಲ್ಲಿ ಗಾಂಧೀಜಿಯವರ ಹತ್ಯೆಯಾಯಿತು. ಆ ದಿನಗಳ ಆಘಾತ–ಆತಂಕಗಳ ನಡುವೆ 26 ವರ್ಷದ ಶ್ರೀಮತಿಯವರು ಗಣನೀಯ ಸಂಖ್ಯೆಯ ಕೃತಿಗಳನ್ನು ಸೃಷ್ಟಿಸಿದರು. ಆಕೆಯ ಪ್ರತಿಭೆಯನ್ನು 1952ರಲ್ಲಿ ಗುರುತಿಸಲಾಯಿತು. ಆಕೆಯ ವರ್ಣಚಿತ್ರಗಳನ್ನು ಮದ್ರಾಸ್ ಮ್ಯೂಸಿಯಂನ ಸೆಂಟ್ರಲ್ ಹಾಲ್‌ನಲ್ಲಿ ಪ್ರದರ್ಶಿಸಲಾಯಿತು.

ಅನಿವಾರ್ಯ ಸಂದರ್ಭಗಳ ಹಿನ್ನೆಲೆಯಲ್ಲಿ ಶ್ರೀಮತಿ